# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.30 ಕಾಡುಗೊಂಡನಹಳ್ಳಿಗೆ ಸಂಬಂಧಿಸಿದಂತೆ ದಿನಾಂಕ: 05-02-2022 ರಂದು ಶ್ರೀ.ವೆಂಕಟ ದುರ್ಗಾ ಪ್ರಸಾದ್ ಕುಂಚಾಲ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಮತ್ತು ವಿಪತ್ತು ನಿರ್ವಹಣಾ ಸಮಿತಿ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ವೆಂಕಟ ದುರ್ಗಾ ಪ್ರಸಾದ್ ಕುಂಚಾಲ, | ಜಂಟಿ ನಿರ್ದೇಶಕರು (ನಗರಯೋಜನೆ-ಸ್ಕ್ವಾಡ್) ಹಾಗೂ ನೋಡಲ್ಅಧಿಕಾರಿ& ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ-30 ಕೆ.ಜಿ.ಹಳ್ಳಿ |
| 2 | ಶ್ರೀಮತಿ.ಸಾವಿತ್ರಿ | ಸಹಾಯಕ ಅಭಿಯಂತರರು, & ಸದಸ್ಯ ಕಾರ್ಯದರ್ಶಿಗಳು ವಾರ್ಡ್ ಸಮಿತಿ ವಾರ್ಡ್ ಸಂಖ್ಯೆ.30. ಕೆ.ಜಿ.ಹಳ್ಳಿ. |
| 3 | ಶ್ರೀ.ಹನುಮಂತ್ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 4 | ಕುಮಾರಿ ಮೋನಿಕಾ.ಡಿ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ಮೊಹಮ್ಮದ್ ಮಜಹುದ್ದೀನ್ | ಹೆಚ್.ಆರ್.ಪಿ.ಜಿ |
| 6 | ಶ್ರೀ.ಪಿ.ಚಂದ್ರಶೇಖರ್.ಜಿ.ಎಸ್ | HRPG |
| 7 | ಶ್ರೀ.ರಾಜೇಂದ್ರ | ಕೆ.ಜಿ.ಹಳ್ಳಿ ವಾರ್ಡ್ ಬ್ಲಾಕ್ ಅಧ್ಯಕ್ಷರು |
| 8 | ಶ್ರೀ.ಫಹೀಮ್ | ಅಲ್ಪಸಂಖ್ಯಾತರ ಅಧ್ಯಕ್ಷರು |
| 9 | ಶ್ರೀ.ಎರ್ರನ್ | ಸಾರ್ವಜನಿಕರು |
| 10 | ಶ್ರೀ.ಮೋಹನ್ | ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರ ಮೇಲ್ವಿಚಾರಕರು |

ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

(ಪು.ತಿ.ನೋ)

## ದಿನಾಂಕ: 01-01-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಯಂತೆ ವಹಿಸಲಾದ ಕ್ರಮ.

ಸಭೆಯ ನಡಾವಳಿಯಂತೆ ವಿಷಯ ಸಂಖ್ಯೆ: 2-ವಿದ್ಯುತ್ ವಿಭಾಗ ಬಿ.ಬಿ.ಎಂ.ಪಿ, 3-.ಬಿ.ಡಬ್ಲ್ಯ್.ಎಸ್.ಎಸ್.ಬಿ ಉಪ-ವಿಭಾಗ, 4- ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ & 5- ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ರ ಸಂಬಂಧ ಭಾಗಶಃ ಕ್ರಮವಹಿಸಲಾಗಿದೆ ಇನ್ನುಳಿದ ಕ್ರಮ ಸಂಖ್ಯೆ: 6- ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೋಲೀಸ್ ಠಾಣೆ (ಸಂಚಾರ) ಮತ್ತು 7-ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೋಲೀಸ್ ಠಾಣೆ (ಕಾನೂನು ಸುವ್ಯವಸ್ಥೆ) ಸಂಬಂಧ ಕ್ರಮ ವಹಿಸದೆ ಬಾಕಿ ಇರುವುದರಿಂದ ಕೂಡಲೇ ಕ್ರಮ ವಹಿಸುವಂತೆ ಸೂಚಿಸಲಾಗಿದೆ.

1) **ಘನತ್ಯಾಜ್ಯ ನಿರ್ವಹಣೆ:**-ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಮತ್ತು ಮನೆ ಮನೆ ಹೋಗಿ ಕಸ ಸಂಗ್ರಹಿಸುತ್ತಿಲ್ಲವೆಂದು ಶ್ರೀ.ಸಜ್ಜು ರವರು ತಿಳಿಸಿರುತ್ತಾರೆ. ವಾಹನ ದುರಸ್ಥಿಯಲ್ಲಿರುವುದರಿಂದ ಘನತ್ಯಾಜ್ಯ ನಿರ್ವಹಣೆ ಮಾಡಲು ಸಾಧ್ಯವಾಗಿರುವುದಿಲ್ಲ. ಆದರೆ ಈಗ ವಾಹನ ದುರಸ್ಥಿ ಪಡಿಸಿರುವುದರಿಂದ ಘನತ್ಯಾಜ್ಯ ನಿರ್ವಹಣೆಯನ್ನು ನಿಯಮಿತವಾಗಿ ನಿರ್ವಹಿಸಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ಘನತ್ಯಾಜ್ಯ ನಿರ್ವಹಣೆಯ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ತಿಳಿಸಿರುತ್ತಾರೆ. ವಾರ್ಡ್‌ನ ನೋಡಲ್ ಅಧಿಕಾರಿರವರು ವಾಹನ ದುರಸ್ಥಿ ಸಮಯದಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸಿಕೊಳ್ಳಲು ಸೂಚಿಸಿರುತ್ತಾರೆ.
**(ಕ್ರಮ :-ಸ.ಕಾ.ಅ ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ಬೆಂಗಳೂರು)**

2) **ಬೀದಿ ದೀಪಗಳ ನಿರ್ವಹಣೆ ಬಗ್ಗೆ:**-ವಾರ್ಡ್ ವ್ಯಾಪ್ತಿಯ 9ನೇ ಮುಖ್ಯರಸ್ತೆ ಪಿಳ್ಳಣ್ಣಗಾರ್ಡನ್‌ನಲ್ಲಿರುವ ಪಾರ್ಕ್‌ನ ಒಳಗಡೆ ಹೊಸ ವಿದ್ಯುತ್ ದೀಪಗಳನ್ನು ಅಳವಡಿಸಲು ಹಾಗೂ 5ನೇ ಮುಖ್ಯರಸ್ತೆ ಬಿ.ಎಂ.ಲೇಔಟ್, ನೂರ್ ಮಸ್ಜೀದ್ ಹತ್ತಿರ, 3ನೇ ಅಡ್ಡರಸ್ತೆ ಆರೋಕ್ಯಮ್ಮ ಲೇಔಟ್, 2ನೇ ಮತ್ತು 6ನೇ ಅಡ್ಡರಸ್ತೆ ಬಿ.ಎಂ.ಲೇಔಟ್‌ನ ಒಟ್ಟು 14 ಬೀದಿ ದೀಪಗಳನ್ನು ದುರಸ್ಥಿ ಪಡಿಸಲು ಶ್ರೀ. ಫಹೀಮ್ ರವರು ತಿಳಿಸಿದ್ದು, ವಾರ್ಡ್ ಸಭೆಯಲ್ಲಿ ಹಾಜರಿದ್ದ ಶ್ರೀ.ಮೋಹನ್ ಗುತ್ತಿಗೆದಾರರ ಸೂಪರ್‌ವೈಸರ್ ರವರು ಬೀದಿ ದೀಪಗಳನ್ನು ದುರಸ್ಥಿಪಡಿಸುವ ಸಮಯದಲ್ಲಿ ಫಿಟಿಂಗ್ಸ್, ಮದರ್‌ಬೋರ್ಡ್ಸ್‌ಗಳು ಹಾಳಾಗಿರುವುದು ಕಂಡು ಬಂದಿದ್ದು, ಹೊಸ ಫಿಟಿಂಗ್ಸ್ ಮತ್ತು ಮದರ್ ಬೋರ್ಡ್ಸ್‌ಗಳನ್ನು ಒದಗಿಸಲು ಕೋರಿರುತ್ತಾರೆ. ಅದರಂತೆ ಸದರಿ ವಿಷಯದ ಬಗ್ಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸಹಾಯಕ ಅಭಿಯಂತರರು ರವರಿಗೆ ತಿಳಿಸಲು ವಾರ್ಡ್‌ನ ನೊಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.
**(ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ವಿಭಾಗ ಬಿ.ಬಿ.ಎಂ.ಪಿ)**

3) **ನೀರು ಸರಭರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ):-** ವಾರ್ಡ್ ವ್ಯಾಪ್ತಿಯಲ್ಲಿ 9ನೇ ಮುಖ್ಯರಸ್ತೆ ಪಿಳ್ಳಣ್ಣಗಾರ್ಡನ್‌ನಲ್ಲಿ ಕಾವೇರಿ ನೀರಿನ ಸರಬರಾಜಿನ ಬಗ್ಗೆ ಸಮಸ್ಯೆಯಿದ್ದು, ಪ್ರಸ್ತುತ ಅಳವಡಿಸಿರುವ ಪೈಪ್‌ಲೈನ್ ಅನ್ನು ದೊಡ್ಡ ಗಾತ್ರದ ವ್ಯಾಸಕ್ಕೆ ಬದಲಾಯಿಸಲು ಶ್ರೀ.ಅಫ್ಸರ್ ರವರು ಸಭೆಯಲ್ಲಿ ತಿಳಿಸಿದರು. ಮೆಕ್ಕಾ ಮಸ್ಜೀದ್, 9ನೇ ಮತ್ತು 10ನೇ ಅಡ್ಡರಸ್ತೆಗಳ ಬಿ.ಎಂ.ಲೇಔಟ್‌ನಲ್ಲಿ ಮ್ಯಾನ್‌ಹೋಲ್ ಕವರ್‌ಗಳನ್ನು ಬದಲಾಯಿಸಲು ಮತ್ತು ಮ್ಯಾನ್‌ಹೋಲ್ ಅನ್ನು ಎತ್ತರಿಸಲು ಸಾರ್ವಜನಿಕರು ತಿಳಿಸಿರುತ್ತಾರೆ.

ನರಸಿಂಹಯ್ಯ ಬಡಾವಣೆಯಲ್ಲಿ ಸುಮಾರು 20 ವರ್ಷದಿಂದ ಕಾವೇರಿ ನೀರು ಸರಬರಾಜು ಆಗುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿದ್ದು, ಸಭೆಯಲ್ಲಿ ಹಾಜರಿದ್ದ ಶ್ರೀ.ಹನುಮಂತ್ ಸಹಾಯಕ ಅಭಿಯಂತರರು ರವರು ಇಂದೇ ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ವಿಷಯಗಳ ಬಗ್ಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಂಡು ವರದಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಲು ವಾರ್ಡ್‌ನ ನೊಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.
**(ಕ್ರಮ :- ಸ.ಕಾ.ಅ.ಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ, ಫ್ರೆಜರ್‌ಟೌನ್)**

4) <u>ಆರೋಗ್ಯ ವೈಧ್ಯಾಧಿಕಾರಿಗಳು</u>:- ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆ ನಿಯಂತ್ರಣಕ್ಕಾಗಿ ಫಾಗಿಂಗ್ ಅನ್ನು ನಿಯಮಿತವಾಗಿ ಸಿಂಪಡಿಸುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿರುತ್ತಾರೆ. ಸಭೆಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಗೈರು ಹಾಜರಾಗಿರುವುದರಿಂದ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಂಡು ಮುಂದಿನ ಸಭೆಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಹಾಜರಾಗುವಂತೆ ತಿಳಿಸಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ:- ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ)</u>

5) <u>ಕಾಮಗಾರಿ ಇಲಾಖೆ</u>:- ವಾರ್ಡ್ ವ್ಯಾಪ್ತಿಯಲ್ಲಿನ 2ನೇ ಮುಖ್ಯರಸ್ತೆ ಬಿ.ಎಂ.ಲೇಔಟ್‌ನಲ್ಲಿರುವ ಡೆಬ್ರೀಸ್ ತೆರವುಗೊಳಿಸಲು, 2ನೇ ಮುಖ್ಯರಸ್ತೆ ಬಿ.ಎಂ.ಲೇಔಟ್ ಚರಂಡಿಯ ಹೂಳನ್ನು ತೆಗೆಯಲು ಸಾರ್ವಜನಿಕರು ತಿಳಿಸಲಾಗಿದ್ದು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ Sign Board ಗಳಿಗೆ ಅಳವಡಿಸಿರುವ ಸ್ಟಿಕರ್‌ಗಳು ಬೀಳುವ ಸಂಭವವಿರುತ್ತದೆ ಹಾಗೂ ಕೆಲವು ಪುಂಡರು ಹಾಳು ಮಾಡಿರುತ್ತಾರೆ. ಆದ್ದರಿಂದ ಇದರ ಬದಲಾಗಿ ಪೇಂಟಿಂಗ್ ಮಾಡಿದರೆ ಬಾಳಿಕೆ ಬರುವುದೆಂದು ಸಾರ್ವಜನಿಕರು ಅಭಿಪ್ರಾಯ ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಮುಂದಿನ ಅನುದಾನದಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರು ತಿಳಿಸಿದರು. ವಾರ್ಡ್‌ನ ನೋಡಲ್ ಅಧಿಕಾರಿ ರವರು ಸದರಿ ಕಾಮಗಾರಿಗಳ ಸ್ಥಳ ಪರಿಶೀಲಿಸಿ ಆದ್ಯತೆ ಮೇರೆಗೆ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ವಾರ್ಡ್ ವ್ಯಾಪ್ತಿಯಲ್ಲಿನ 20 ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲು ಹಾಗೂ ರಸ್ತೆ ಉಬ್ಬುಗಳಿಗೆ ಜೀಬ್ರಾ ಪೇಂಟಿಂಗ್ ಮಾಡಿಸಲು ಶ್ರೀ.ಮೊಹಮ್ಮದ್ ಮಜಹುದ್ದೀನ್, ಹೆಚ್.ಆರ್.ಪಿ.ಜಿ ರವರು ಸಭೆಯಲ್ಲಿ ತಿಳಿಸಿದ್ದು, ಸದರಿ ವಿಷಯದ ಬಗ್ಗೆ ಸಂಬಂಧಪಟ್ಟ ಪೊಲೀಸ್ ಇಲಾಖೆ ಮತ್ತು ಟ್ರಾಫಿಕ್ ಇಂಜನಿಯರಿಂಗ್ ಸೆಲ್ ರವರ ಸಮನ್ವಯದೊಂದಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ- ವಿಭಾಗ ಬಿ.ಬಿ.ಎಂ.ಪಿ)</u>

6) <u>ಬೆಸ್ಕಾಂ ವಿಭಾಗ:-</u> ವಾರ್ಡ್ ವ್ಯಾಪ್ತಿಯ ಮಾರಿಯಮ್ಮ ಟೆಂಪಲ್ ಹತ್ತಿರ ಹೆಚ್ಚವರಿಯಾಗಿರುವ ಒಂದು ಕಂಬವನ್ನು ತೆರವುಗೊಳಿಸಲು ಮತ್ತು 2ನೇ ಮುಖ್ಯ ರಸ್ತೆ ಬಿ.ಎಂ.ಲೇಔಟ್ ಮದರಸಾ ಹತ್ತಿರ ಕಂಬವು ರಸ್ತೆಯ ಮಧ್ಯಭಾಗದಲ್ಲಿದ್ದು, ನೀರು ಮತ್ತು ಒಳಚರಂಡಿ ವಾಹನವು ಸಂಚರಿಸಲು ತೊಂದರೆಯಾಗುತ್ತಿರುವುದರಿಂದ ಒಂದು ಎಲೆಕ್ಟ್ರಿಕಲ್ ಕಂಬಗಳನ್ನು ಸ್ಥಳಾಂತರಿಸಲು ಶ್ರೀ.ಫಹೀಮ್ ರವರು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಬಗ್ಗೆ ಸ್ಥಳ ಪರಿಶೀಲಿಸಿ ಬೆಸ್ಕಾಂ ವಿಭಾಗದ ಸಹಾಯಕ ಅಭಿಯಂತರರು ರವರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ವಿಭಾಗ ಬಿ.ಬಿ.ಎಂ.ಪಿ)</u>

7) <u>ಅರಣ್ಯ ಇಲಾಖೆ:-</u> ವಾರ್ಡ್ ವ್ಯಾಪ್ತಿಯ ದೇವರಾಜ್ ಅರಸ್ ರಸ್ತೆ, ಟೆಲಿಗ್ರಾಫ್ ಸ್ಟ್ರೀಟ್‌ನಲ್ಲಿ 2 ಮರಗಳು ಬೀಳುವ ಸ್ಥಿತಿಯಲ್ಲಿದ್ದು, ಮರಗಳನ್ನು ತೆರವುಗೊಳಿಸಲು ಹಾಗೂ ಪಿಳ್ಳಣ್ಣಗಾರ್ಡನ್ ಪ್ರದೇಶದ ಹಲವು ರಸ್ತೆಗಳಲ್ಲಿ ಮರಗಳ ಕೊಂಬೆಗಳನ್ನು ಕತ್ತರಿಸಲು ಶ್ರೀ.ಎರ್ರನ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಸ್ಥಳ ಪರಿಶೀಲಿಸಿ ಅರಣ್ಯ ಇಲಾಖೆ ರವರಿಗೆ ಕ್ರಮ ಕೈಗೊಳ್ಳಲು ತಿಳಿಸಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ:- ವಲಯ ಅರಣ್ಯಾಧಿಕಲಾರಿಗಳು ಪೂರ್ವ ಬಿ.ಬಿ.ಎಂ.ಪಿ</u>

<u>8) ತೋಟಗಾರಿಕೆ ಇಲಾಖೆ:-</u> ವಾರ್ಡ್ ವ್ಯಾಪ್ತಿಯ 9ನೇ ಮುಖ್ಯರಸ್ತೆಯ ಪಿಳ್ಳಣ್ಣಗಾರ್ಡನ್ ಇಂದಿರಾ ಕ್ಯಾಂಟೀನ್ ಪಕ್ಕದಲ್ಲಿರುವ ಪಾರ್ಕ್ ಅನ್ನು ನಿಯಮಿತವಾಗಿ ನಿರ್ವಹಣೆ ಮಾಡಲು ಹಾಗೂ ಕಾವಲುಗಾರರನ್ನು ನೇಮಿಸಲು ಸಾರ್ವಜನಿಕರು ತಿಳಿಸಿದ್ದು, ಸದರಿ ವಿಷಯದ ಬಗ್ಗೆ ತೋಟಗಾರಿಕೆ ಇಲಾಖೆ ರವರಿಗೆ ಕ್ರಮ ಕೈಗೊಳ್ಳಲು ತಿಳಿಸಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ:- ತೋಟಗಾರಿಗೆ ಇಲಾಖೆ ಪೂರ್ವ ಬಿ.ಬಿ.ಎಂ.ಪಿ)</u>

9) ಕಾನೂನು ಸುವ್ಯವಸ್ಥೆ (ಪೊಲೀಸ್ ಇಲಾಖೆ)- ವಾರ್ಡ್ ವ್ಯಾಪ್ತಿಯ ರೈಲ್ವೆ ಗೇಟ್ ಹತ್ತಿರ ಹಾಗೂ ಶಾಲೆಗಳ ಹತ್ತಿರ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದು, ನಿಯಮಿತವಾಗಿ ಹೊಯ್ಸಳ ವಾಹನವನ್ನು ಗಸ್ತು ತಿರುಗುವ ಬಗ್ಗೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಕೆ.ಜಿ.ಹಳ್ಳಿ ಪೊಲೀಸ್ ಇಲಾಖೆ ರವರಿಗೆ ತಿಳಿಸಲು ನೋಡಲ್ ಅಧಿಕಾರಿ ರವರು ಸಭೆಯಲ್ಲಿ ಸೂಚಿಸಿರುತ್ತಾರೆ.

(ಕ್ರಮ: ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೊಲೀಸ್ ಠಾಣೆ)

10) ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ವಾರ್ಡ್ ವ್ಯಾಪ್ತಿಯ ವೆಂಕಟೇಶಪುರ ಮುಖ್ಯರಸ್ತೆಯಲ್ಲಿ ಚರಂಡಿಯ ಹೂಳನ್ನು ತೆಗೆಯಲು ಶ್ರೀ.ಸಜ್ಜು ರವರು ತಿಳಿಸಿದ್ದು, ಸದರಿ ಸ್ಥಳವನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸಭೆಯಲ್ಲಿ ಸೂಚಿಸಿರುತ್ತಾರೆ.

(ಕ್ರಮ: ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿಬಿಎಂಪಿ)

ಮುಂದುವರೆದು ದಿನಾಂಕ: 05-02-2022 ರಂದು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿರುವ ಆರೋಗ್ಯ ವೈದ್ಯಾಧಿಕಾರಿ ಬಿ.ಬಿ.ಎಂ.ಪಿ ಇಲಾಖೆ, ಪೊಲೀಸ್ ಇಲಾಖೆ, ಬೆಸ್ಕಾಂ ಇಲಾಖೆ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹಾಗೂ ಯಾವುದೇ ವಾರ್ಡ್ ಸಮಿತಿ ಸಭೆಗೆ ಹಾಜರಾಗಿರದ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಮುಂದಿನ ವಾರ್ಡ್ ಸಮಿತಿ ಸಭೆಗೆ ಅಧಿಕಾರಿಗಳು ತಪ್ಪದೇ ಹಾಜರಾಗಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಮೇಲಾಧಿಕಾರಿಗಳಿಗೆ ವರದಿ ಮಾಡಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

ಈ ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ವಂದನೆಗಳೊಂದಿಗೆ,**

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

ಜಂಟಿ ನಿರ್ದೇಶಕರು (ನಗರ ಯೋಜನೆ- ಸ್ಕ್ವಾಡ್)
ಹಾಗೂ ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

ಪ್ರತಿಯನ್ನು:

1. ಮಾನ್ಯ ಶಾಸಕರು, ಸರ್ವಜ್ಞನಗರ ವಿಧಾನ ಸಭಾಕ್ಷೇತ್ರ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ ಕಳುಹಿಸಿದೆ.
6. ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
7. ಸಹಾಯಕ ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಕ್ರಮಕ್ಕಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ-ವಿಭಾಗ ಪಿಳ್ಳಣ್ಣಗಾರ್ಡನ್ ಕೆ.ಜಿ.ಹಳ್ಳಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

10. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ- ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ,ಡಬ್ಲ್ಯೂ.ಎಸ್.ಎಸ್.ಬಿ ಫ್ರೇಜರ್‌ಟೌನ್ ಉಪ-ವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13. ಉಪ-ಅರಣ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
14. ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
15. ತೋಟಗಾರಿಗೆ ಅಧೀಕ್ಷಕರು ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
16. ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೊಲೀಸ್‌ಠಾಣೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
17. ಕಛೇರಿ ಕಡತಕ್ಕೆ.